ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1795
ಸದಸ್ಯರ ಹೆಸರು : ಶ್ರೀ. ಕಾರಜೋಳ ಗೋವಿಂದ್ ಮೆಕಪ್ಪ (ಮುಧೋಳ)
ವಿಷಯ : ಖಾಲಿ ಇರುವ ಹುದ್ದೆಗಳ ಮಾಹಿತಿ ನೇಮಕಾತಿ
ಸಚಿವರ ಹೆಸರು ಮತ್ತು ಪದನಾಮ : ಶ್ರೀ ವೈ ನಾಗಪ್ಪ. (ಮಾನ್ಯ ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ. ಪ್ರಶ್ನೆ

ಅ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು? (ವೃಂದವಾರು ಪ್ರತ್ಯೇಕ ಮಾಹಿತಿ ನೀಡುವುದು)

ಉತ್ತರ

ಸಮಾಜ ಕಲ್ಯಾಣ ಇಲಾಖೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ಇಲಾಖೆಗಳಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳ ವೃಂದವಾರು ವಿವರಗಳನ್ನು ಅನುಭಂಧ– 1.2.ಹಾಗೂ 3ರಲ್ಲಿ ಒದಗಿಸಲಾಗಿದೆ.

ಕ್ರ.ಸಂ. ಪ್ರಶ್ನೆ

ಆ. ಹುದ್ದೆಗಳು ಖಾಲಿ ಇರುವುದಕ್ಕೆ ಕಾರಣವೇನು?

ಉತ್ತರ

ಸರ್ಕಾರದ ಆರ್ಥಿಕ ನಿರ್ಭಂಧವಿರುವ ಪ್ರಯುಕ್ತ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ.

ಕ್ರ.ಸಂ. ಪ್ರಶ್ನೆ

ಇ. ಹುದ್ದೆಗಳು ಖಾಲಿ ಇರುವುದರಿಂದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉತ್ತರ

ಹೌದು

ಕ್ರ.ಸಂ. ಪ್ರಶ್ನೆ

ಈ. ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಭರ್ತಿ ಮಾಡಲಾಗುವುದು?

ಉತ್ತರ

ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೋರಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ;

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವೃಂದ ಮತ್ತು ನೇಮಕಾತಿ, ನೇಮಕಾತಿ ನಿಯಮಗಳು ಸರ್ಕಾರದಿಂದ ಅನುಮೋದನೆಯಾದ ನಂತರ ಆ ಇಲಾಖೆಯ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳುವುದು.

ಅನುಬಂದ –1 ಚುಕ್ಕೆ ಗುರುತಿನ ಸಂಖ್ಯೆ (1795)

ಸಮಾಜ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿರುವ. ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ಮಾಹಿತಿ

(ನಿಯೋಜನೆ ಹುದ್ದೆಗಳು ಒಳಗೊಂಡಂತೆ) ಜನವರಿ 2005 ರಲ್ಲಿದ್ದಂತೆ

ಕ್ರ.ಸಂ	ಹುದ್ದೆಯ ಹೆಸರು	ವೇತನ ಶ್ರೇಣಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಆಯುಕ್ತರು	18400–22400	1	1	0
2	ಜಂಟಿ ನಿರ್ದೇಶಕರು	10620–14960	5	5	0
3	ಉಪ ನಿರ್ದೇಶಕರು	9580–14200	7	7	0
4	ಸಹಾಯಕ ನಿರ್ದೇಶಕರು/ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು/ಯೋಜನಾ ಸಮನ್ವಯ ಅಧಿಕಾರಿಗಳು	7400–13120	33	28	5
5	ಪತ್ರಾಂಕಿತ ವ್ಯವಸ್ಥಾಪಕರು /ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು	6000–11200	177	159	18
6	ಕಚೇರಿ ಅಧೀಕ್ಷಕರು/ ವಿ.ಘ.ಯೋ. ಅಧೀಕ್ಷಕರು ತನಿಖಾ ಸಹಾಯಕರು	5200–9580	257	189	68
7	ಪ್ರಥಮ ದರ್ಜೆ ಸಹಾಯಕರು/ ಲೆಕ್ಕಿಗರು	3850–7050	401	305	96
8	ಶ್ರೇಷ್ಠಲಿಪಿಗಾರರು	3850–7050	12	7	5
9	ದ್ವಿತಿಯ ದರ್ಜೆ ಸಹಾಯಕರು	3000–5450	252	252	0
10	ಸಿ.ಸಿಟಿ.	3000–5450	27	21	6
11	ಬೆರಳಚ್ಚುಗಾರರು	3000–5450	251	187	64
12	ವಾಹನ ಚಾಲಕರು	3000–5450	44	31	13
13	ಸೀನಿಯರ್ ವಾರ್ಡನ್	4575–8400	61	40	21
14	ವಾರ್ಡನ್ / ವಿದ್ಯಾರ್ಥಿ ನಿಲಯ ಮೇಲ್ವಿಚಾರಕರು	3850–7050	1449	1202	247
15	ಹಿರಿಯ ಸಂಚಾಲಕಿ	3850–7050	2	2	0
16	ಸಂಚಾಲಕಿಯರು	3000–5450	450	450	0
17	ವಸತಿ / ಆಶ್ರಮಶಾಲ ಶಿಕ್ಷಕರು	3000–5450	504	348	156
18	ಹೊಲಿಗೆ ತರಬೇತಿ ಶಿಕ್ಷಕರು	3000–5450	61	37	24
19	ನಿರ್ವಾಹಕಿ	2600–4350	450	416	34
20	ಅಡಿಗೆಯವರು	2600–4350	3281	2489	792
21	ಅಡಿಗೆ ಸಹಾಯಕರು	2500–3850	1877	1609	268
22	ರಾತ್ರಿ ಕಾವಲುಗಾರರು	2500–3850	469	359	110
23	ಜವಾನರು	2500–3850	297	278	19
24	ಸೈಕಲ್ ಆರ್ಡರ್ಲಿ	2500–3850	3	3	0
25	ಮಸಾಲಚಿ	2600–4350	1	0	1
26	ಮುಚ್ಚಿ	2600–4350	4	1	3
27	ಕಸ ಗುಡಿಸುವವರು	2500–3850	1	0	1
	ಒಟ್ಟು		**10377**	**8426**	**1951**

ಅನುಬಂಧ–2 ಪರಿಶಿಷ್ಟ ವರ್ಗಗಳ ಇಲಾಖೆ

ಕ್ರಮ ಸಂಖ್ಯೆ	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ದಿ.01.10.05ರಂದು ಹುದ್ದೆಗಳ ಸಂಖ್ಯೆ	ಹುದ್ದೆಗಳ ಸಂಖ್ಯೆ
1	2		3	4
1	ನಿರ್ದೇಶಕರು IAS/KAS(Super Time Scale)		1	–
2	ಉಪ ನಿರ್ದೇಶಕರು	9580–14200	2	–
3	ಸಹಾಯಕ ನಿರ್ದೇಶಕರು	7400–13120	1	1
4	ಯೋಜನಾ ಸಮನ್ವಯಧಿಕಾರಿ	7400–13120	5	2
5	ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ	7400–13120	4	2
6	ಸಂಶೋಧನಾಧಿಕಾರಿ	7400–13120	1	–
7	ಲೆಕ್ಕಾಧಿಕಾರಿಗಳು	7400–13120	1	1
8	ಪ್ರಾಂಶುಪಾಲರು	6000–11200	1	1
9	ಕಚೇರಿ ಅಧೀಕ್ಷಕರು	5200–9580	9	7
10	ಸಹಾಯಕ ಸಾಂಖ್ಯಿಕ ಅಧಿಕಾರಿ	4575–8400	1	1
11	ಹಿರಿಯ ಅಭಿಯಂತರರು	4575–8400	1	1
12	ಸಹಾಯಕ ಅಧ್ಯಾಪಕರು	4575–8400 4	4	
13	ಭಾಷಾ ಶಿಕ್ಷಕರು	4575–8400	2	2
14	ದೈಹಿಕ ಶಿಕ್ಷಕರು	4575–8400	1	1
15	ಸಂಗೀತ ಶಿಕ್ಷಕರು	4575–8400	1	1
16	ಪ್ರಥಮ ದರ್ಜೆ ಸಹಾಯಕರು	3850–7050	24	12
17	ಶೀಘ್ರಲಿಪಿಗಾರರು	3850–7050	4	3
18	ಪರಿಶಿಷ್ಟ ವರ್ಗಗಳ ವಿಸ್ತರಣಾಧಿಕಾರಿ	3850–7050	18	11
19	ನಿಲಯ ಮೇಲ್ವಿಚಾರಕರು	3850–7050	114	45
20	ಆಶ್ರಮಶಾಲೆ ಶಿಕ್ಷಕರು	3300–6300	457	325
21	ಎ.ಎನ್.ಎಂ	3300–6300 9	5	
22	ಕ್ರಾಫ್ಟ್ ಶಿಕ್ಷಕರು	3300–6300	1	1
23	ಮಾಧ್ಯಮಿಕ ಶಾಲಾ ಶಿಕ್ಷಕರು	3300–6300	4	3
24	ದ್ವಿತೀಯ ದರ್ಜೆ ಸಹಾಯಕರು	3000–5450	13	2

ಅನುಬಂಧ –3 ಹಿಂದುಳಿದ ವರ್ಗಗಳ ಇಲಾಖೆ

ಕ್ರಮ ಸಂಖ್ಯೆ	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1)	ನಿರ್ದೇಶಕರು	01	01	–
2)	ಜಂಟಿ ನಿರ್ದೇಶಕರು	02	02	–
3)	ಉಪ ನಿರ್ದೇಶಕರು	03	03	
4)	ಸಹಾಯಕ ನಿರ್ದೇಶಕರು. ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು	32	32	
5)	ಲೆಕ್ಕಾಧಿಕಾರಿಗಳು	01	01	
6)	ಪತ್ರಾಂಕಿತ ವ್ಯವಸ್ಥಾಪಕರು: ಪ್ರಾಂಶುಪಾಲರು. ಬೋಧನಾ ಕೇಂದ್ರಗಳು	06	06	
7)	ಲೆಕ್ಕಪತ್ರ ಅಧೀಕ್ಷಕರು	02	02	
8)	ಕಚೇರಿ ಅಧೀಕ್ಷಕರು: ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು	213	213	
9)	ಪ್ರಥಮ ದರ್ಜೆ ಸಹಾಯಕರು (ರಾಜ್ಯ ಲೆಕ್ಕಪತ್ರ ಇಲಾಖೆ)	01	–	01
10)	ಪ್ರಥಮ ದರ್ಜೆ ಸಹಾಯಕರು	63	58	05
11)	ಶೀಘ್ರಲಿಪಿಗಾರರು	05	04	01
12)	ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ನಿಲಯಪಾಲಕರು(ಪುರುಷ)	144	111	33
13)	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯಗಳ ನಿಲಯಪಾಲಕರು (ಮಹಿಳೆ)	120	16	104
14)	ನಿರೀಕ್ಷಕರು. ಕಾಪೆಂಟರಿ ಕಮ್ ಪ್ರೊಡಕ್ಷನ್ ಸೆಂಟರ್. ಹುಬ್ಬಳ್ಳಿ	01	01	–
15)	ಆಶ್ರಮ ಶಾಲೆ ಶಿಕ್ಷಕರು (ತರಬೇತಿ ಹೊಂದಿಲ್ಲದ ಮತ್ತು ಹೊಂದಿದ)	132	60	72
16)	ಹೊಲಿಗೆ ತರಬೇತಿ ಕೇಂದ್ರಗಳ ಬೋಧಕರು	48	10	33
17)	ದ್ವಿತಿಯ ದರ್ಜೆ ಸಹಾಯಕರು	100	97	03
18)	ಬೆರಳಚ್ಚುಗಾರರು	41	33	08

19)	ನಿಲಯ ಮೇಲ್ವಿಚಾರಕರು (ಪುರುಷ)	978	913	65
20)	ನಿಲಯ ಮೇಲ್ವಿಚಾರಕರು (ಮಹಿಳೆ)	164	153	11
21)	ಮಹಿಳಾ ಕಲ್ಯಾಣ ಕೇಂದ್ರಗಳ ಸಂಚಾಲಕಿಯರು	45	30	15
22)	ವಾಹನ ಚಾಲಕರು	42	42	–
23)	ಅಡುಗೆಯವರು ಕಂಡಕ್ಟಸ್	2874	2606	268
24)	ಅಡುಗೆ ಸಹಾಯಕರು	1528	1387	141
25)	ರಾತ್ರಿ ಕಾವಲುಗಾರರು	236	221	15
26)	ಜವಾನರು	49	49	–
	ಒಟ್ಟು	**6831**	**6051**	**780**

1	2		3	4
25	ಬೆರಳಚ್ಚುಗಾರರು	3000–5450	12	5
26	ಚಾಲಕರು	3000–5450	12	4
27	ಸಂಚಾಲಕರು(ಮಹಿಳಾ)	3000–5450	38	13
28	ನಿರ್ವಾಹಕರು	3000–5450	38	9
29	ಬೆತ್ತ ತರಬೇತಿ ಬೋಧಕರು	3000–5450	1	1
30	ಜೇನು ಕೃಷಿ ಸಹಾಯಕ	3000–5450	1	1
31	ಕೃಷಿ ಸಹಾಯಕ	3000–5450	1	1
32	ಅಡುಗೆಯವರು ಆಶ್ರಮಶಾಲೆ/ ವಿದ್ಯಾರ್ಥಿನಿಲಯ	2600–4350	637	344
33	ಅಡುಗೆ ಸಹಾಯಕರು ಆಶ್ರಮಶಾಲೆ/ ವಿದ್ಯಾರ್ಥಿನಿಲಯ	2500–3850	323	180
34	ಜವಾನ ದಲಾಯತ್	2500–3850	36	06
35	ರಾತ್ರಿ ಕಾವಲುಗಾರ	2500–3850	42	30
	ಒಟ್ಟು		**1870**	**1030**

ಶ್ರೀ ಕಾರಜೋಳ ಗೋವಿಂದ ವೆಂಕಟಪ್ಪ ; ಮಾನ್ಯ ಅಧ್ಯಕ್ಷರೆ. ಉತ್ತರವನ್ನು ಒದಗಿಸಿದ್ದಾರೆ. ನಾನು ಏನು ಕೇಳಿದ್ದೆ ಎಂದರೆ ಸಮಾಜಕಲ್ಯಾಣ ಇಲಾಖೆಯಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇದೆ ಅವನ್ನು ಯಾವಾಗ ನೇಮಿಸುತ್ತೀರಿ ಎಷ್ಟು ದಿನದಲ್ಲಿ ಭರ್ತಿ ಮಾಡುತ್ತೀರಿ ಎಂದು ಪ್ರಶ್ನೆಯನ್ನು ಕೇಳಿದ್ದೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ಸರ್ಕಾರದಿಂದ ಅನುಮೋದನೆಯಾದ ನಂತರ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಏನು ತಿಳಿದುಕೊಳ್ಳಬೇಕು. ಯಾವ ಸರ್ಕಾರದಿಂದ ಇವರು ಅನುಮೋದನೆಯನ್ನು ಕೇಳುತ್ತಿದ್ದಾರೆ? ಏನೊ ಆಂದ್ರಪ್ರದೇಶ. ಮಹಾರಾಷ್ಟ್ರ ಸರ್ಕಾರದಿಂದ ಇವರು ಕೇಳುತ್ತಿದ್ದಾರೆಯೇ? ದಯವಿಟ್ಟು ಅದನ್ನು ತಾವು ಕ್ಲಿಯರ್ ಮಾಡಬೇಕು.

ಶ್ರೀ ಡಾ. ವೈ.ನಾಗಪ್ಪ : ಮಾನ್ಯ ಅಧ್ಯಕ್ಷರೆ. ಹಾಗೇನೂ ಇಲ್ಲ. ನಮ್ಮ ಸರ್ಕಾರಕ್ಕೆ ನಾವು ಬರೆದಿದ್ದೇವೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ಡಿಪಾರ್ಟ್‌ಮೆಂಟ್ ಬೇರೆ. ನಾವು ನೇರವಾಗಿ ನೇಮಕಾತಿಯನ್ನು ಮಾಡುವುದಕ್ಕೆ ಬರುವುದಿಲ್ಲ. ಆ ಒಂದು ದೃಷ್ಟಿಯಿಂದ ಅದು ಸ್ವಲ್ಪ ಹಿಂದೆ ಬಿದ್ದಿದೆ.

ಶ್ರೀ ಕಾರಜೋಳ ಗೋವಿಂದ ವೆಂಕಟಪ್ಪ : ಮುಖ್ಯಮಂತ್ರಿಗಳ ತರುವಾಯ ಯಾವುದಾದರೂ ಇಲಾಖೆಯ ಸಚಿವರಿಗೆ ಅಧಿಕಾರ ಇತ್ತೆಂದರೆ ಅದು ಸಮಾಜಕಲ್ಯಾಣ ಇಲಾಖೆಗೆ ಇದೆ. ಈ ರಾಜ್ಯದಲ್ಲಿರುವಂತಹ ಎಲ್ಲಾ ಇಲಾಖೆಗಳು ಅವರ ಅಧೀನಕ್ಕೆ ಬರುತ್ತವೆ. ಮುಖ್ಯಮಂತ್ರಿಗಳನ್ನು ಬಿಟ್ಟರೆ ಅವರಿಗೆ ಅಧಿಕಾರ ಇರುವುದು. ಅವರು ತಮ್ಮ ಚೇಂಬರ್‌ನಲ್ಲಿ ಸಂಬಂಧಪಟ್ಟ ಕಾನೂನು ಇಲಾಖೆಯವರನ್ನು ಮತ್ಯಾವ ಇಲಾಖೆಯವರು ಬರುತ್ತಾರೆ ಅವರೆಲ್ಲರನ್ನೂ ಕರೆದು 15 ನಿಮಿಷದಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ಅಮೆಂಡ್‌ಮೆಂಟ್‌ನ್ನು ತರಬಹುದು. ಮತ್ತು ಅದಕ್ಕೆ ಅನುಮೋದನೆಯನ್ನು ಕೊಡಬಹುದು. ಆ ಅಧಿಕಾರವು ಅವರಿಗೆ ಇದೆ. ದಯಮಾಡಿ ನಾನು ಮಾನ್ಯ ಸಚಿವರಲ್ಲಿ ಈ ರೀತಿಯಾದ ಉತ್ತರವನ್ನು ನಿರೀಕ್ಷಿಸಿರಲಿಲ್ಲ. ಸರ್ಕಾರ ಎಂದರೆ ಏನು? ಯಾರೋ ಒಬ್ಬ ಸಮಾಜಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಉತ್ತರವನ್ನು ಕೊಟ್ಟಂಗೆ ಕೊಟ್ಟರೆ ಹೇಗೆ? ಅಲ್ಲದೆ ನೀವು ಸಚಿವರಾಗಿದ್ದೀರಿ. ನೀವು ಮುಖ್ಯಮಂತ್ರಿಗಳಷ್ಟೆ ಬಲಾಡ್ಯರಾಗಿದ್ದಿರಿ ನೀವು ನಿಮ್ಮ ಅಧಿಕಾರವನ್ನು ಚಲಾಯಿಸಬೇಕು. ಆ ಕೆಲಸವನ್ನು ತಾವು ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಇನ್ನು ನಾನು ಉಪಪ್ರಶ್ನೆಯನ್ನು ಕೇಳುವ ಕಡೆಗೆ ಹೋಗುತ್ತೇನೆ. ದುರ್ದೈವದ ಸಂಗತಿ ಎಂದರೆ, ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ವಸತಿ ಶಾಲೆಗಳು ಇವೆ. ಆಶ್ರಮ ಶಾಲೆಗಳು ಇವೆ. ಅವುಗಳಲ್ಲಿ 180 ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಅಧ್ಯಕ್ಷರು: ಮಾನ್ಯ ಕಾರಜೋಳರವರೆ. ತಾವು ಬೇಗ ಕೇಳಬೇಕು. ನಾನು 1 ಗಂಟೆಯೊಳಗಾಗಿ ಪ್ರಶ್ನೋತ್ತರವನ್ನು ಮುಗಿಸಬೇಕಾಗಿದೆ.

ಶ್ರೀ ಕಾರಜೋಳ ಗೋವಿಂದ ವೆಂಕಟಪ್ಪ : ನಾನು ಬಹಳ ಟೈಮ್ ತೆಗೆದುಕೊಳ್ಳುವುದಿಲ್ಲ. ಬೇಗ ಮುಗಿಸುತ್ತೇನೆ. 180 ಹುದ್ದೆಗಳು ಖಾಲಿ ಇವೆ. ಶಿಕ್ಷಕರು ಇಲ್ಲದೆ ಬಡವರ ಮಕ್ಕಳಿಗೆ ಯಾವ ರೀತಿಯಾಗಿ ಶಿಕ್ಷಣವನ್ನು ಅವರು ಕೊಡುತ್ತಾರೆ ಇದರ ಬಗ್ಗೆ ತಾವೇ ಹೇಳಬೇಕು. ಅಲ್ಲಿ ಶಿಕ್ಷಕರುಗಳೇ ಇಲ್ಲ. ಆಶ್ರಮಶಾಲೆ ವಸತಿ ಶಾಲೆಗಳು ಇವೆ. ಪರಿಶಿಷ್ಟ ಜಾತಿ ಜನಾಂಗದವರ ಮಕ್ಕಳಿಗೆ, ಅಲ್ಲಿ ಹಾಸ್ಟೆಲ್‌ಗಳು ಇವೆ. 1062 ಅಡಿಗೆಯವರ ಹುದ್ದೆಗಳು ಸಹ ಖಾಲಿ ಇವೆ. ಯಾವ ರೀತಿಯಾಗಿ ಈ ಇಲಾಖೆಯು ನಡೆಯುತ್ತದೆ. ದಯವಿಟ್ಟು ತಾವು ಈ ಬಗ್ಗೆ ಉತ್ತರವನ್ನು ಕೊಡಬೇಕು. ನೀವು ಈ ಪ್ರೊಸೆಸನ್ನು 15 ದಿವಸದೊಳಗಾಗಿ ಕಂಪ್ಲೀಟ್ ಮಾಡಬೇಕು. ಈ ಬಡವರ ಮಕ್ಕಳಿಗೆ ಶಿಕ್ಷಣ ಸಿಗುವ ಬಗ್ಗೆ ಶಿಕ್ಷಕರುಗಳನ್ನು ನೇಮಕ ಮಾಡಬೇಕು. ಮತು ಊಟ ಮಾಡತಕ್ಕಂತಹ ವಿದ್ಯಾರ್ಥಿ ನಿಲಯಗಳಿಗೆ ಅಡಿಗೆಯವರನ್ನು ನೇಮಿಸಬೇಕು. ಅಲ್ಲಿ ರಾತ್ರಿ ಹೊತ್ತು ಕಾವಲು ಕಾಯುವುದಕ್ಕೆ ಅಲ್ಲಿ ಕಾವಲುಗಾರರು ಇಲ್ಲ. 110 ಕಾವಲುಗಾರರ ಹುದ್ದೆಗಳು ಖಾಲಿ ಇವೆ. ಅಲ್ಲಿ ಹೆಣ್ಣುಮಕ್ಕಳು ಇರುತ್ತಾರೆ. ಬಡವರು ಸಣ್ಣ ಮಕ್ಕಳು ಇರುತ್ತಾರೆ ಅಲ್ಲಿ ಎಷ್ಟೋ ಅನ್ಯಾಯಗಳು ಆಗುತ್ತದೆ ಅದಕ್ಕಾಗಿ ಕಾವಲುಗಾರರ ಹುದ್ದೆಯನ್ನು ಸಹ ತುಂಬಬೇಕು. ತಾವು 15 ದಿವಸದೊಳಗಾಗಿ ಮಾಡುತ್ತೇವೆಂದು ಉತ್ತರವನ್ನು ಕೊಟ್ಟರೆ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ಡಾ. ವೈ. ನಾಗಪ್ಪ: ಇದರ ಬಗ್ಗೆ ನಾವು ಆರ್ಥಿಕ ಇಲಾಖೆಗೆ ಬರೆದಿದ್ದೇವೆ. ಇನ್ನು ಅವರು ನಮಗೆ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಆ ಒಂದು ನಿಬಂಧನೆಯಿಂದ ಇವತ್ತು ಶಿಕ್ಷಕರ ಹುದ್ದೆಗಳು ಖಾಲಿ ಬಿಟ್ಟಿದ್ದೇವೆ. ಅಲ್ಲಿಂದ ತಕ್ಷಣ ಖಂಡಿತಾ ಆ ಕೆಲಸವನ್ನು ನಾವು ಮಾಡುತ್ತೇವೆ. ಅವರು ಎರಡನೇ ಪ್ರಶ್ನೆಯಲ್ಲಿ ಅಡಿಗೆಯವರು ಇಲ್ಲವೆಂದು ಹೇಳಿದ್ದಾರೆ. ಅದು ಗೊತ್ತಿದೆ. ಅದಕ್ಕೆ ನಾವು ಈಗಾಗಲೇ ಕೆಲವರನ್ನು ಅಪಾಯಿಮೆಂಟ್ ಕೊಟ್ಟಿದ್ದೇವೆ. ಅವರಿಗೆ ನೇರ ನೇಮಕಾತಿಯ ಅಡಿಯಲ್ಲಿ ಪುನಃ ಅವರನ್ನು ಕರೆದು ಅಪಾಯಿಟ್‌ಮೆಂಟ್ ಕೊಡುತ್ತಿದ್ದೇವೆ.

ಶ್ರೀ ಕಾರಜೋಳ ಗೋವಿಂದ ವೆಂಕಟಪ್ಪ ; ಬಡವರ ಮಕ್ಕಳ ಬಗ್ಗೆ ನೀವು ಇಷ್ಟೊಂದು ತಾತ್ಸಾರ ಮನೋಭಾವನೆಯಿಂದ ನಡೆದುಕೊಳ್ಳುವುದು ಸರಿಯಲ್ಲ. ಆ ಜನಾಂಗದ ಬಗ್ಗೆ ಸರ್ಕಾರಕ್ಕೆ ನಿಜವಾಗಿ ಕಾಳಜಿ ಇದ್ದರೆ ನೀವು ನಿರ್ದಿಷ್ಟವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡು ಅವರಿಗೆ ಎಲ್ಲಾ ರೀತಿಯ ವ್ಯವಸ್ಥೆಯನ್ನು

ಮಾಡಿಕೊಡಬೇಕಾಗುತ್ತದೆ. ತಲಾ ತಲಾಂತರದಿಂದ ಅಸಮಾನತೆಯಲ್ಲಿ. ಅಸ್ಪೃಶ್ಯತೆಯ ನೆರಳಿನಲ್ಲಿ ಬದುಕುತ್ತಿರುವವರ ಬಗ್ಗೆ ನೀವು ಇಷ್ಟೊಂದು ಕಠೋರವಾಗಿ ನಡೆದುಕೊಂಡರೆ ಹೇಗೆ? ಇದನ್ನು ತಾವು ಸ್ಪೆಷಲ್ ಆಗಿ ಮಾಡಬೇಕಾಗುತ್ತದೆ.

ಡಾ: ವೈ.ನಾಗಪ್ಪ : ನಾನು ಹಿಂದುಳಿದ ವರ್ಗಕ್ಕೆ ಸೇರಿರುವ ವ್ಯಕ್ತಿ. ಅವರ ಬಗ್ಗೆ ನಮಗೂ ಸಹ ಕಳಕಳಿ ಇದೆ. ನಾವು ಇದರ ಬಗ್ಗೆ ಆರ್ಥಿಕ ಇಲಾಖೆಗೆ ಬರೆದಿದ್ದು ಅವರಿಂದ ಅನುಮತಿ ನಮಗೆ ಇನ್ನೂ ಸಿಕ್ಕಿಲ್ಲ. ಆ ದೃಷ್ಟಿಯಿಂದ ಇದನ್ನು ಪೆಂಡಿಂಗ್ ಇಟ್ಟಿದ್ದೇವೆ.

ಶ್ರೀ ಕಾರಜೋಳ ಗೋವಿಂದ ವೆಂಕಟಪ್ಪ : ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಉಪ ಕಾರ್ಯದರ್ಶಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ನಿಮ್ಮ ಕೈಕೆಳಗೆ ಕೆಲಸ ಮಾಡುವಂತಹ ಅಡಿಷನಲ್ ಸೆಕ್ರೆಟರಿಯವರನ್ನು ನಿಮ್ಮ ಚೇಂಬರ್‌ಗೆ 10 ನಿಮಿಷದಲ್ಲಿ ಕರೆಸಬಹುದು. ಅವರು ನಿಮ್ಮ ಮೇಲಿನವರು ಅಂತ ತಿಳಿದಿದ್ದರೇನು? ಅವರನ್ನು ಕರೆಸಿರಿ. ಎಲ್ಲಾ ಇಲಾಖೆಯಲ್ಲೂ ಶೇಕಡ 18 ರಷ್ಟು ಗ್ರಾಂಟ್ ಇದೆ. ಆ ಹಣವನ್ನು ಯೂಸ್ ಮಾಡಿ ಈ ಜನಾಂಗದ ಉದ್ಧಾರಕ್ಕಾಗಿ ಕೆಲಸ ಮಾಡಿ. ಅವರನ್ನು ಕರೆದು ನಿಮ್ಮ ಸಂಬಳವನ್ನು ಬಂದ್ ಮಾಡುತ್ತೇನೆ ಅಂತ ಅವರಿಗೆ ಹೇಳಿ. ಆ ಕೆಲಸ ಆಗುವವರೆಗೂ ಮುಂದಿನ ತಿಂಗಳ ಸಂಬಳವನ್ನು ತೆಗೆದುಕೊಳ್ಳಬಾರದು ಅಂತ ಹೇಳಿ. ಆ ಸೆಕ್ರೆಟರಿಗಳು ದಾನ ಧರ್ಮಕ್ಕೋಸ್ಕರ ಕೆಲಸ ಮಾಡುತ್ತಾರೆಯೇ?

ಡಾ : ವೈ.ನಾಗಪ್ಪ : ಆಯಿತು. ತಾವು ಹಿರಿಯ ಸದಸ್ಯರು ಹೇಳಿದಂತೆ ಇದರ ಬಗ್ಗೆ ಗಮನ ಹರಿಸಿ ಆದಷ್ಟು ಬೇಗ ಇದನ್ನು ತೆಗೆದುಕೊಳ್ಳುತ್ತೇವೆ.

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **1884**

2) ಸದಸ್ಯರ ಹೆಸರು : ಶ್ರೀ ಪರಮೇಶ್ವರ ನಾಯ್ಕ ಪಿ.ಟಿ.(ಹರಪನಹಳ್ಳಿ)

3) ಉತ್ತರಿಸುವ ಸಚಿವರು : ಶ್ರೀ ಮೆರಾಜುದ್ದೀನ ಎನ್.ಪಟೇಲ್\
(ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಹರಪನಹಳ್ಳಿ ವ್ಯಾಪ್ತಿಯಲ್ಲಿ ಬರುವ ಕಡತಿ. ಮಾಚಿಹಳ್ಳಿ. ಬಾಗಳಿ. ಕೆ.ಕಲ್ಲಳ್ಳಿ. ಮುಂತಾದ ಗ್ರಾಮಗಳಲ್ಲಿ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು (ಆರ್.ವಿ.ಡಿ.) ಸರ್ಕಾರ ಉದ್ದೇಶಿಸಿದೆಯೇ: